# ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ

## ಹೊಸ ಶಿಕ್ಷಣ ನೀತಿಯ ಬಗ್ಗೆ ಮೂಲಮಟ್ಟದ (ಗ್ರಾಮದಿಂದ ರಾಜ್ಯದವರೆಗೆ) ಸಮಾಲೋಚನೆಗಾಗಿ ಕೈಪಿಡಿ

**ಪೀಠಿಕೆ :**

ಕೇಂದ್ರ ಸರ್ಕಾರಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ 1986 ಹಾಗೂ ಇದರ ತಿದ್ದುಪಡಿ 1992 ಶಿಕ್ಷಣ ಕ್ಷೇತ್ರ ಮಾರ್ಗದರ್ಶಿಯಾಗಿದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯು 1992 ತಿದ್ದುಪಡಿಯಾಗಿದ್ದು, ಇದು ಇತರೆ ವಿಷಯಗಳ ನಡುವೆ ಗಮನ ಹರಿಸುವುದಲ್ಲದೇ, ಶಿಕ್ಷಣದಲ್ಲಿ ರಾಷ್ಟ್ರೀಯ ಸಮಾನತೆಯನ್ನು ತರಲು, ವಯಸ್ಕರ ಶಿಕ್ಷಣವನ್ನು ಸಾಮೂಹಿಕ ಆಂದೋಲನವನ್ನಾಗಿ ಮಾಡಲು, ಸಾರ್ವತ್ರಿಕ ಶಾಲಾ ಲಭ್ಯತೆ ಒದಗಿಸಲು, ಶಾಲೆಯಲ್ಲಿ ಮಕ್ಕಳು ಉಳಿಕೆ ಮತ್ತು ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟ ಅಭಿವೃದ್ಧಿ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಒತ್ತು, ವೇಗವಾಗಿ ಬೆಳೆಯುವ ಶಾಲೆಗಳ ನಿರ್ಮಾಣ ಅಂದರೆ ಪ್ರತಿ ಜಿಲ್ಲೆಯಲ್ಲಿ ನವೋದಯ ಶಾಲೆಗಳು, ಪ್ರೌಢಶಾಲೆಯಲ್ಲಿ ವೃತ್ತಿಶಿಕ್ಷಣವನ್ನು ಅನುವು ಮಾಡುವುದು, ಪ್ರೌಢಶಿಕ್ಷಣದಲ್ಲಿ ಜ್ಞಾನದ ಸಂಶ್ಲೇಷಣೆ ಮತ್ತು ಅಂತರ ವಿಭಾಗಗಳ ಸಂಶೋಧನೆ, ರಾಜ್ಯಗಳಲ್ಲಿ ಹೆಚ್ಚಿನ ಮುಕ್ತ ವಿಶ್ವವಿದ್ಯಾಲಯಗಳ ಸ್ಥಾಪನೆ, ಅಖಿಲ ಭಾರತ ತಾಂತ್ರಿಕ ಶಿಕ್ಷಣದ ಬಲವರ್ಧನೆ, ಕ್ರೀಡೆಗೆ ದೈಹಿಕ ಶಿಕ್ಷಣ, ಯೋಗಭ್ಯಾಸಕ್ಕೆ ಪ್ರೋತ್ಸಾಹ ಮತ್ತು ಪರಿಣಾಮಕಾರಿಯಾದ ಮೌಲ್ಯಮಾಪನ ಪದ್ಧತಿಯನ್ನು ಅಳವಡಿಸಿಕೊಳ್ಳುವುದರ ಬಗ್ಗೆ ತಿಳಿಸಿದೆ.

ಸಮೂಹವು ಗುಣಮಟ್ಟ ಬಯಸುವ ಕ್ರಿಯಾಶೀಲತೆ ಬದಲಾವಣೆಯನ್ನು ಅಗತ್ಯತೆಗೆ ತಕ್ಕಂತೆ ರೂಪಿಸಲು ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು ರಚಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಇದರಲ್ಲಿ ಗುಣಮಟ್ಟ ಶಿಕ್ಷಣ, ಆವಿಷ್ಕಾರ ಮತ್ತು ಸಂಶೋಧನೆ, ಮಕ್ಕಳಲ್ಲಿ ಅಗತ್ಯ ಕೌಶಲ್ಯಗಳು ಹಾಗೂ ಜ್ಞಾನವನ್ನು ಅಭಿವೃದ್ಧಿಗೊಳಿಸುವ ಮೂಲಕ ಭಾರತವನ್ನು ಜ್ಞಾನದಲ್ಲಿ ಅತ್ಯುತ್ತಮ ಶಕ್ತಿಯನ್ನಾಗಿ ಮಾಡುವುದು ಮತ್ತು ವಿಜ್ಞಾನ, ತಂತ್ರಜ್ಞಾನ, ಶೈಕ್ಷಣಿಕ ಮತ್ತು ಕೈಗಾರಿಕಾ ವಿಷಯಗಳಲ್ಲಿನ ಮಾನವ ಕೊರತೆಯನ್ನು ನೀಗಿಸುವುದೂ ಸೇರಿರುತ್ತದೆ.

### 2. ಮೂಲಮಟ್ಟದ ಸಮಾಲೋಚನ ಪ್ರಕ್ರಿಯೆಯ ಉದ್ದೇಶ :

ಸಮಾಲೋಚನ ಪ್ರಕ್ರಿಯೆಯ ಉದ್ದೇಶವು ಸಮಗ್ರವಾಗಿ, ಪಾಲ್ಗೊಳ್ಳುವಿಕೆಯ ಮೂಲಕ ಸರ್ವ ವಿಷಯ ತಜ್ಞರ ಅಭಿಪ್ರಾಯಗಳು, ಶಿಕ್ಷಣ ಕ್ಷೇತ್ರದ ಅನುಭವಗಳು, ಸಂಶೋಧನೆ, ಅನುಷ್ಠಾನಗೊಳಿಸುವ ಪಾಲುದಾರರ ಪ್ರತಿಕ್ರಿಯೆ, ಅಲ್ಲದೇ ಒಳ್ಳೆಯ ಆಚರಣೆಗಳಿಂದ ಕಲಿತುಕೊಂಡಿರುವ ಪಾಠಗಳನ್ನು ಅರಿಯುವುದೇ ಆಗಿದೆ. ಹಿಂದಿನ ಆಯೋಗಗಳು ಶಿಕ್ಷಣ ನೀತಿಯನ್ನು ರಚಿಸುವಾಗ ಕೆಳಕಂಡ ಸಾಂಪ್ರದಾಯಿಕ ವಿಷಯಗಳನ್ನು ಸೇರಿಸಿಕೊಂಡಿದ್ದವು:

- ವಿಷಯ ತಜ್ಞರ ಸಮಿತಿ ರಚಿಸುವುದು, ಕೆಲಸ ಮಾಡುವವರ ಗುಂಪು ಅಥವಾ ಉಪಗುಂಪುಗಳ ರಚನೆಯ ಮೂಲಕ ಮೇಲಿನಿಂದ ಕೆಳಗಿನ ಸಮಾಲೋಚನೆಯ ವಿಧಾನ.
- ವಿಷಯಾಧಾರಿತ ವಿಷಯಗಳ ಮೇಲೆ ಗುಂಪುಗಳ ರಚನೆ.
- ಕ್ಷೇತ್ರ ಭೇಟಿ, ಚರ್ಚೆ, ಸಮ್ಮೇಳನ, ಕಾರ್ಯಾಗಾರ, ಸಂದರ್ಶನಗಳು, ಸೀಮಿತ ವ್ಯಕ್ತಿಗಳೊಡನೆ ಚರ್ಚೆ, ವಿಶೇಷ ಅಧ್ಯಯನ, ಸಂವಿಧಾನಾತ್ಮಕವಾಗಿ ಚುನಾಯಿತಿ ಪ್ರತಿನಿಧಿಗಳ ಸಭೆಗಳ ಆಧಾರದ ಮೇಲೆ ಶಿಫಾರಸ್ಸುಗಳನ್ನು ನೀಡಲಾಗಿದೆ.
- ಸರ್ಕಾರ, ಶೈಕ್ಷಣಿಕ ಸಂಸ್ಥೆಗಳು, ಕೈಗಾರಿಕೆಗಳು, ತಜ್ಞರು ಮತ್ತು ಮಾಧ್ಯಮದ ವಿವಿಧ ಪಾಲುದಾರರೊಡನೆ ಸಮಾಲೋಚನ ಪ್ರಕ್ರಿಯೆ.
- 6 ತಿಂಗಳಿಂದ 3 ವರ್ಷದವರೆಗೆ ಸಮಾಲೋಚನಾ ಅವಧಿಯಾಗಿತ್ತು.

ಸಮಾಲೋಚನೆಯ ನಂತರದ ಪ್ರಕ್ರಿಯೆಯು ಅತ್ಯಂತ ವ್ಯಾಪಕವಾಗಿದ್ದು, ಮೇಲಿನಿಂದ ಕೆಳಗಿನ ವಿಧಾನವನ್ನು ಹೊಂದಿದ್ದು, ಸೀಮಿತ ಪಾಲುದಾರರ ಸಂಕ್ಷಿಪ್ತ ಅಭಿಪ್ರಾಯವನ್ನು ಪಡೆದು ಶಿಕ್ಷಣ ನೀತಿಯನ್ನು ರಚಿಸಲಾಗಿದೆ. ಮುಂದುವರೆದಂತೆ ವಿಷಯಾಧಾರಿತ ಚರ್ಚೆಗಳು ನಡೆದಿರುತ್ತದೆ.

**3. ಹೊಸ ಶಿಕ್ಷಣ ನೀತಿಯ ಸಮಾಲೋಚನೆಗಾಗಿ ಗುರ್ತಿಸಿದ ವಿಷಯಗಳು :**

ಒಟ್ಟಾಗಿ ಸಮಾಲೋಚನೆಗಾಗಿ 33 ವಿಷಯಗಳನ್ನು (13 ವಿಷಯಗಳು ಪ್ರಾಥಮಿಕ ಶಿಕ್ಷಣಕ್ಕೆ ಮತ್ತು 20 ವಿಷಯಗಳು ಉನ್ನತ ಶಿಕ್ಷಣಕ್ಕೆ) ಗುರ್ತಿಸಲಾಗಿದ್ದು, ಅವು ಈ ಕೆಳಗಿನಂತಿವೆ :

1. ಪ್ರಾಥಮಿಕ ಶಾಲೆಯಲ್ಲಿ ಕಲಿಕೆಯ ಪರಿಣಾಮವನ್ನು ಖಚಿತಪಡಿಸುವುದು.
2. ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣವನ್ನು ವಿಸ್ತರಿಸುವುದು.
3. ವೃತ್ತಿ ಶಿಕ್ಷಣವನ್ನು ಬಲಗೊಳಿಸುವುದು.
4. ಶಾಲೆಯ ಪರೀಕ್ಷಾ ವಿಧಾನದಲ್ಲಿ ಸುಧಾರಣೆ ತರುವುದು.
5. ಉತ್ತಮ ಗುಣಮಟ್ಟದ ಶಿಕ್ಷಕರನ್ನು ಬೋಧನೆಗೆ ಸಿದ್ಧಪಡಿಸಲು ಶಿಕ್ಷಕರ ಶಿಕ್ಷಣದಲ್ಲಿ ನವೀಕರಣ ತರುವುದು.
6. ವಯಸ್ಕರ ಶಿಕ್ಷಣ ಹಾಗೂ ರಾಷ್ಟ್ರೀಯ ಮುಕ್ತ ಶಾಲಾ ವ್ಯವಸ್ಥೆಗಳ ಮೂಲಕ ವಿಶೇಷವಾಗಿ ಹೆಣ್ಣು ಮಕ್ಕಳು, ಪ.ಜಾತಿ, ಪ.ಪಂಗಡ ಹಾಗೂ ಅಲ್ಪಸಂಖ್ಯಾತರ ಅಕ್ಷರತೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ತ್ವರಿತಗೊಳಿಸುವುದು.
7. ಶಾಲೆಗಳಲ್ಲಿ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ವ್ಯವಸ್ಥೆಯಾಧಾರಿತ ಶಿಕ್ಷಣವನ್ನು ವೃದ್ಧಿಗೊಳಿಸುವುದು.
8. ಶಾಲಾ ಶಿಕ್ಷಣದಲ್ಲಿ ವಿಜ್ಞಾನ ಹಾಗೂ ಗಣಿತ ಬೋಧನೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಉತ್ತಮ ಪಡಿಸಲು ಹೊಸ ಜ್ಞಾನ, ಶಿಕ್ಷಣ ಶಾಸ್ತ್ರ, ಹೊಸ ವಿಧಾನಗಳನ್ನು ಅಳವಡಿಸುವುದು.

9. ಶಾಲೆಯ ಗುಣಮಟ್ಟ, ಶಾಲೆಯ ಮೌಲ್ಯಮಾಪನ ಮತ್ತು ಶಾಲೆಯ ನಿರ್ವಹಣಾ ವ್ಯವಸ್ಥೆ.
10. ಅಂತರ್ವೇಶನ ಶಿಕ್ಷಣವನ್ನು ಅನುವು ಮಾಡಿಕೊಡುವುದು : ಪ.ಜಾತಿ, ಪ.ಪಂಗಡ, ಹೆಣ್ಣು ಮಕ್ಕಳು, ಅಲ್ಪಸಂಖ್ಯಾತರು ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳನ್ನೊಳಗೊಂಡ ಶಿಕ್ಷಣ.
11. ಭಾಷೆಗಳನ್ನು ಅಭಿವೃದ್ಧಿಗೊಳಿಸುವುದು.
12. ಸಮಗ್ರ ಶಿಕ್ಷಣ – ಮೌಲ್ಯಗಳು, ದೈಹಿಕ ಶಿಕ್ಷಣ, ಕಲೆ ಮತ್ತು ಕರಕುಶಲ ಶಿಕ್ಷಣ, ಜೀವನ ಕೌಶಲಗಳು.
13. ಮಕ್ಕಳ ಆರೋಗ್ಯದೆಡೆ ಕೇಂದ್ರೀಕರಣ.

## 4. ವಿವಿಧ ಹಂತಗಳಲ್ಲಿ ಸಮಾಲೋಚನಾ ಪ್ರಕ್ರಿಯೆಗಾಗಿ ವೇಳಾಪಟ್ಟಿ :

ಸಮಾಲೋಚನೆಯ ಪ್ರಕ್ರಿಯೆಯನ್ನು 3 ವಿಭಾಗಗಳಲ್ಲಿದ್ದು, (1) ಗ್ರಾಮ ಮಟ್ಟದಲ್ಲಿ ಸಮಾಲೋಚನೆ / ಮೂಲಮಟ್ಟದಿಂದ ರಾಜ್ಯಮಟ್ಟದವರೆಗೆ, (2) ಕಂಪ್ಯೂಟರ್ ಮೂಲಕ ಆನ್‌ಲೈನ್ ಸಮಾಲೋಚನೆ ಮತ್ತು (3) ವಿಷಯಾಧಾರಿತ ಸಮಾಲೋಚನೆ ಸೇರಿದಂತೆ, ಜೋನಲ್ ಮತ್ತು ರಾಷ್ಟ್ರಮಟ್ಟದ ಸಮಾಲೋಚನೆ. ಈ ಹಂತಗಳ ವಿವರವನ್ನು ಕೆಳಗೆ ವಿವರಿಸಲಾಗಿದೆ:

### 4.1 ಗ್ರಾಮಮಟ್ಟ / ಮೂಲಮಟ್ಟದಿಂದ ರಾಜ್ಯದವರೆಗೆ ಸಮಾಲೋಚನೆ :

| | |
|---|---|
| ಗ್ರಾಮ ಪಂಚಾಯತ್<br><br>ಏಪ್ರಿಲ–ಮೇ 2015 | • ಶಿಕ್ಷಣ ನೀತಿಯ ಉದ್ದೇಶವನ್ನು ತಿಳಿಸಲು ಹಾಗೂ ಅಭಿಪ್ರಾಯ ಸಂಗ್ರಹಿಸಲು ಎಲ್ಲಾ 2.5 ಲಕ್ಷ ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ (ವಿಲೇಜ್ ಎಜುಕೇಷನ್ ಕಮಿಟಿ) ಸಭೆ (ಸಾಧ್ಯವಾದಲ್ಲಿ ಒಂದೇ ನಿರ್ಧಿಷ್ಟ ದಿನದಂದು).<br>• ಪಾಲುದಾರರು : ಗ್ರಾಮ ಶಿಕ್ಷಣ ಸಮಿತಿ (ವಿ.ಇ.ಸಿ)+ಶಾಲಾ ಅಭಿವೃದ್ಧಿ ಸಮಿತಿ (ಎಸ್.ಡಿ.ಎಂ.ಸಿ.), ಎಸ್.ಡಿ.ಎ.ಸಿ.ಗಳ ಪ್ರತಿನಿಧಿಗಳಾಗಿ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸಾಮಾಜಿಕ ಗುಂಪುಗಳು / ದುರ್ಬಲ ವರ್ಗದ ಗುಂಪುಗಳ ಪ್ರತಿನಿಧಿಗಳು.<br>• ಶಾಲಾ ಆಡಳಿತ ಸಮಿತಿ ಮುಂತಾದ ಇತರೆ ಮಧ್ಯಸ್ಥಗಾರರನ್ನು ಸಭೆಗೆ ಆಹ್ವಾನಿಸಬಹುದು.<br>• ಸುಮಾರು 2.5 ಲಕ್ಷ ಸಭೆಗಳು ನಡೆಯುವುದು.<br>• ವಿಷಯಗಳು ಮತ್ತು ಸಂಬಂಧಿಸಿದ ಪ್ರಶ್ನೆಗಳನ್ನು ನೀಡುವುದು.<br>• ಪ್ರತಿ ಪಂಚಾಯತ್‌ಗೆ ನೀಡಿರುವ ಗುರ್ತನ್ನು ಬಳಸಿ, ಲಾಗಿನ್ ಮಾಡಿ ಅಭಿಪ್ರಾಯಗಳನ್ನು ಹಾಗೂ ಮಾಹಿತಿಗಳನ್ನು MyGov website ನಲ್ಲಿ ಅಪ್‌ಲೋಡ್ ಮಾಡುವುದು. (ಗ್ರಾಮ/ಬ್ಲಾಕ್/ಜಿಲ್ಲೆ ಯಾವ ಮಟ್ಟದಲ್ಲಿ |

| | |
|---|---|
| | ಅನುಕೂಲವಿದೆಯೇ ಅಲ್ಲಿ)<br>• MyGov Team ನವರು ಸಂಬಂಧಿಸಿದ ಎನ್.ಐ.ಸಿ.ಯ ಡಿ.ಐ.ಒ.ಗಳನ್ನು ಸಂಪರ್ಕಿಸಿ ಪ್ರತಿ ಗ್ರಾಮವು ಶಿಫಾರಸ್ಸುಗಳನ್ನು ಅಪ್‌ಲೋಡ್ ಮಾಡಲು ಅಗತ್ಯವಿರುವ ಐ.ಡಿ.ಗಳನ್ನು ತಯಾರಿಸಿ, ನೀಡಬೇಕು. ಗ್ರಾಮಮಟ್ಟದ ಸಮಾಲೋಚನಾ ಅಭಿಪ್ರಾಯಗಳನ್ನು ಇಂಟರ್‌ನೆಟ್ ಸೌಲಭ್ಯವಿರುವ ಬ್ಲಾಕ್ ಅಥವಾ ಜಿಲ್ಲಾ ಕೇಂದ್ರದಲ್ಲಿ ವ್ಯವಸ್ಥೆ ಮಾಡುವುದು.<br>• MyGov Team ನವರು ವಿಷಯವಾರು ಪದಗಳನ್ನು ಮಿತಿಗೊಳಿಸಿದ ಮಾಹಿತಿಯನ್ನು ತಾಳೆ ನೋಡಬೇಕಾಗುತ್ತದೆ.<br>• ಮಾಹಿತಿ ನೀಡದವರನ್ನು ಗುರ್ತಿಸಲು ಸಹಾಯವಾಗುವಂತೆ ಪ್ರತ್ಯೇಕ ಗುರುತು ನೀಡುವುದು. |
| ಬ್ಲಾಕ್ ಮಟ್ಟದಲ್ಲಿ<br>ಜೂನ್-ಜುಲೈ, 2015 | • ಸುಮಾರು 6600 ಸಭೆಗಳು.<br>• ಅನುಷ್ಠಾನಗಾರರು : ಬ್ಲಾಕ್ ಶಿಕ್ಷಣ ಸಮಿತಿ + ನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು.<br>• ವಿಷಯಗಳು ಮತ್ತು ಸಂಬಂಧಿಸಿದ ಪ್ರಶ್ನೆಗಳನ್ನು ನೀಡುವುದು.<br>• ಗ್ರಾಮಮಟ್ಟದ ನಿರ್ಣಯಗಳನ್ನು ಚರ್ಚಿಸುವುದು ಮತ್ತು ಹೊಸ ವಿಷಯಗಳನ್ನೂ ಚರ್ಚಿಸುವುದು.<br>• ಬ್ಲಾಕ್‌ನಲ್ಲಿನ ಎಲ್ಲಾ ಗ್ರಾಮ ಶಿಕ್ಷಣ ಸಮಿತಿ (ಎಸ್.ಡಿ.ಎಂ.ಸಿ.)ಗಳು ನೀಡಿರುವ ಶಿಪಾರಸ್ಸುಗಳ ಮೌಲ್ಯಮಾಪನ ಮಾಡಲು ಬ್ಲಾಕ್ ಶಿಕ್ಷಣ ಸಮಿತಿಗಳು ವಿವಿಧ ಅನುಷ್ಟಾನಾಧಿಕಾರಿಗಳ ಸಭೆ ನಡೆಸುವುದು ಮತ್ತು ಅವರ ಅಭಿಪ್ರಾಯವನ್ನೂ ತಿಳಿಸುವುದು.<br>• ಪ್ರತಿ ಬ್ಲಾಕ್‌ಗಳು ತಮ್ಮ ಹಂತದಲ್ಲಿ ಶಿಪಾರಸ್ಸುಗಳು ಹಾಗೂ ಅಭಿಪ್ರಾಯಗಳನ್ನು ಕ್ರೋಢೀಕರಿಸುವುದು.<br>• ಸುಮಾರು 6600 ಸಭೆಗಳ ನಂತರ ಬ್ಲಾಕ್‌ಮಟ್ಟದಲ್ಲಿ 6600 ದಾಖಲೆಗಳಿದ್ದು, ಇದನ್ನು MyGov Webportal ನಲ್ಲಿ ಅಪ್‌ಲೋಡ್ ಮಾಡುವುದು. ಇಂಟರನೆಟ್ ಸೌಲಭ್ಯವನ್ನು ಆಧರಿಸಿ ಅಪ್‌ಲೋಡ್ ಎಂಟ್ರಿಗಳನ್ನು ಬ್ಲಾಕ್ ಅಥವಾ ಜಿಲ್ಲಾ ಹಂತದಲ್ಲಿ ಮಾಡುವುದು. |
| ನಗರ ಸ್ಥಳೀಯ ಸಂಸ್ಥೆಗಳು | • ಸುಮಾರು 3700 ಸಭೆಗಳು<br>• ಅನುಷ್ಠಾನ ಮಧ್ಯಸ್ಥಗಾರರು : ನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು |

| | |
|---|---|
| | ಮತ್ತು ಪಾಲುದಾರರು / ಚುನಾಯಿತ ಮುನಿಸಿಪಲ್ ಕೌನ್ಸಿಲರ್‌ಗಳು.<br>• ನಗರ ಪ್ರದೇಶಗಳಲ್ಲಿ ಶಿಕ್ಷಣ ಸಮಸ್ಯೆಗಳನ್ನು ಚರ್ಚಿಸಲು ಮುನಿಸಿಪಲ್ / ಕಾರ್ಪೋರೇಷನ್‌ನ ಸದಸ್ಯರನ್ನು ಆಹ್ವಾನಿಸುವುದು.<br>• ಚರ್ಚಾ ವಿಷಯಗಳು ಮತ್ತು ಸಂಬಂಧಿಸಿದ ಪ್ರಶ್ನೆಗಳನ್ನು ನೀಡುವುದು.<br>• ನಿರ್ಣಯಗಳನ್ನು MyGov Webportal ನಲ್ಲಿ ಅಪ್‌ಲೋಡ್ ಮಾಡುವುದು.<br>• ರಾಜ್ಯಮಟ್ಟದಲ್ಲಿ ಕ್ರೋಢೀಕರಿಸುವುದು. |
| ಜಿಲ್ಲಾ ಮಟ್ಟ<br>ಆಗಸ್ಟ್, 2015 | • ಸುಮಾರು 676 ಸಭೆಗಳು<br>• ಅನುಷ್ಠಾನ ಮಧ್ಯಸ್ಥಗಾರರು : ಜಿಲ್ಲಾ ಪಂಚಾಯತ್ + ಜಿಲ್ಲಾ ಶಿಕ್ಷಣ ಸಮಿತಿ, ಜಿಲ್ಲಾ ಶಿಕ್ಷಣಾಧಿಕಾರಿಗಳು, ನಗರ ಆಡಳಿತದ ಪ್ರತಿನಿಧಿಗಳು, ಆಯ್ಕೆ ಮಾಡಿದ ಕಾಲೇಜುಗಳ ಪ್ರಾಂಶುಪಾಲರು / ಪ್ರೌಢ ಮತ್ತು ಪದವಿ ಪೂರ್ವ ಶಾಲೆಯ ಮುಖ್ಯೋಪಾಧ್ಯಾಯರು, ಡಯಟ್‌ಗಳು, ಕೆಲವು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ತಪಾಸಣಾಧಿಕಾರಿಗಳು, ವಯಸ್ಕರ ಶಿಕ್ಷಣ ಇಲಾಖೆಯವರು.<br>• ಚರ್ಚಾ ವಿಷಯಗಳು ಮತ್ತು ಸಂಬಂಧಿಸಿದ ಪ್ರಶ್ನೆಗಳನ್ನು ನೀಡುವುದು.<br>• ಜಿಲ್ಲಾ ಕಲೆಕ್ಟರ್ / ಮಾಜಿಸ್ಟ್ರೇಟರ್ ಜೊತೆಗೆ ಲೋಕಸಭಾ ಸದಸ್ಯರು / ವಿಧಾನಸಭಾ ಸದಸ್ಯರು ಮುಂತಾದ ವಿವಿಧ ಅನುಷ್ಠಾನಾಧಿಕಾರಿಗಳ ಕಾರ್ಯಾಗಾರವನ್ನು ನಡೆಸುವುದು.<br>• ಬ್ಲಾಕ್‌ಮಟ್ಟದ ನಿರ್ಣಯಗಳ ಕ್ರೋಢೀಕರಣ ಹಾಗೂ ಜಿಲ್ಲಾ ಮಟ್ಟದ ಹೊಸ ವಿಷಯಗಳ ಸೇರ್ಪಡೆ ಮಾಡಿದ ದಾಖಲೆಯನ್ನು ಜಿಲ್ಲಾ ಮಟ್ಟದಲ್ಲಿ ಶಿಫಾರಸ್ಸು ಮಾಡುವುದು.<br>• ಸುಮಾರು 676 ಸಭೆಗಳ ನಂತರ 676 ದಾಖಲೆಗಳು ಇರಬೇಕು.<br>• ಇದನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ MyGov Webportal ನಲ್ಲಿ ಅಪ್‌ಲೋಡ್ ಮಾಡುವುದು. |
| ರಾಜ್ಯ ಮಟ್ಟದಲ್ಲಿ:<br>ಸೆಪ್ಟೆಂಬರ್, 2015 | • ವಿವಿಧ ಅನುಷ್ಠಾನಾಧಿಕಾರಿಗಳು ಸೇರಿದಂತೆ ಪ್ರತಿ ರಾಜ್ಯಕ್ಕೆ ಸುಮಾರು 3 ರೌಂಡ್‌ಟೇಬಲ್ ಸಭೆಗಳನ್ನು ನಡೆಸಿ, ವಿಷಯಾಧಾರಿತ ಚರ್ಚೆ ನಡೆಸಿ, ಜಿಲ್ಲಾ ಹಂತದ ದಾಖಲೆಗಳ ಮೇಲೆ ಚರ್ಚಿಸುವುದು.<br>• ರಾಜ್ಯ ತಂಡವು ಜಿಲ್ಲಾಮಟ್ಟದ ದಾಖಲೆಗಳನ್ನು ಸಂಶ್ಲೇಷಣೆ |

| | |
|---|---|
| | ಮಾಡುವುದಲ್ಲದೇ ರಾಜ್ಯಮಟ್ಟದ ಹೊಸ ವಿಷಯಗಳನ್ನು ಸೇರಿಸಿ, ರಾಜ್ಯಮಟ್ಟದ ದಾಖಲೆಯನ್ನು ರಚಿಸಬೇಕು.<br>• ರಾಜ್ಯಮಟ್ಟದಲ್ಲಿ 36 ಕ್ರೋಢೀಕೃತ ದಾಖಲೆಗಳಿದ್ದು, ಇದನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ, MyGov Webportal ನಲ್ಲಿ ಅಪ್‌ಲೋಡ್ ಮಾಡುವುದು. |

4.2 **ಆನ್‌ಲೈನ್ ಸಮಾಲೋಚನೆ :**

| ಪ್ರಕ್ರಿಯೆ ಮತ್ತು ವೇಳಾಪಟ್ಟಿ | ವಿಧಾನ |
|---|---|
| 1. ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಗಾಗಿ ಕೇಂದ್ರ ಸರ್ಕಾರವು ವಿಷಯವಾರು ಗುಂಪುಗಳನ್ನು www.mygov.in ನಲ್ಲಿ ರಚಿಸುವುದು.<br>2. ಇದರೊಂದಿಗೆ MyGov ಜಿಲ್ಲಾ ಮಟ್ಟದ ಗುಂಪುಗಳನ್ನು ರಚಿಸುವುದು.<br>3. www.mygov.in ನಲ್ಲಿ ಪ್ರತಿ ಸಾರ್ವಜನಿಕ ವ್ಯಕ್ತಿಯು ಭಾಗವಹಿಸಬಹುದು.<br>4. ಇದು 26ನೇ ಜನವರಿ, 2015 ರಿಂದ 30ನೇ ಏಪ್ರಿಲ್, 2015ರವರೆಗೆ ತೆರೆದಿರುತ್ತದೆ. | 1. ಕೇಂದ್ರ ಸರ್ಕಾರವು ಗುರ್ತಿಸಿದ ಪ್ರತಿ ವಿಷಯಕ್ಕೂ ಸಂಕ್ಷಿಪ್ತ ವಿವರಣೆಯನ್ನು ನೀಡಿದೆ. ಪ್ರತಿ ವಿಷಯಕ್ಕು ಪ್ರತ್ಯೇಕ ಲಿಂಕ್ ನೀಡಿದ್ದು, ಇದು ಬಳಸುವ ವ್ಯಕ್ತಿಗಳಿಗೆ ವಿವರವಾದ ವಿಷಯಗಳ ಪರಿಚಯವನ್ನು ಮಾಡುತ್ತದೆ.. ಇದರಲ್ಲಿ ಸಮಗ್ರವಾದ ವಿಷಯವನ್ನು ಸೇರಿಸಲಾಗಿದ್ದು, ಚರ್ಚೆಗೆ ಪ್ರಶ್ನೆಗಳನ್ನು ನೀಡಲಾಗಿದೆ.<br>2. ಇದರಲ್ಲಿನ ಪ್ರತಿ ವಿಷಯದ ನೋಡಲ್ ಅಧಿಕಾರಿಗಳು ಸಂಬಂಧಿಸಿದ ವಿಷಯಗಳ ಚರ್ಚೆಯ ಮಾಡರೇಟರ್ ಆಗಿರುತ್ತಾರೆ. ಚರ್ಚೆಯನ್ನು ಸರಿಯಾದ ರೀತಿಯಲ್ಲಿ ಮುನ್ನಡೆಸುವುದು ಅವರ ಜವಾಬ್ದಾರಿಯಾಗಿರುತ್ತದೆ.<br>3. ಜಿಲ್ಲಾ ಮಟ್ಟದ ಗುಂಪುಗಳಿಗೆ ಜಿಲ್ಲಾ ಮಾಹಿತಿ ಅಧಿಕಾರಿ (ಡಿ.ಐ.ಒ.) ಮಾಡರೇಟರ್ ಆಗಿರುತ್ತಾರೆ. |

4.3 **ಪ್ರಾಂತೀಯ / ವಲಯ ಸಮಾಲೋಚನೆ :**

(ಎ) ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಗುರ್ತಿಸಲ್ಪಟ್ಟ ಸ್ವಾಯತ್ತ ಸಂಸ್ಥೆಗಳ ಸಹಕಾರದೊಂದಿಗೆ ನೋಡಲ್ ಅಧಿಕಾರಿಗಳು 6 (ಆರು) ಪ್ರಾಂತೀಯ . ವಲಯ ಸಮಾಲೋಚನೆಗಳನ್ನು ಸಂಘಟಿಸುವುದು.

- ಉತ್ತರ ವಲಯ :ಹರ್ಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ರಾಜಸ್ಥಾನ, ದೆಹಲಿ ಮತ್ತು ಚಂಢೀಘರ್.
- ಕೇಂದ್ರ ವಲಯ : ಛತ್ತೀಸ್‌ಘರ್, ಉತ್ತರಾಖಾಂಡ್, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ
- ಪೂರ್ವ ವಲಯ : ಬಿಹಾರ್, ಜಾರ್ಖಂಡ್, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ.
- ಪಶ್ಚಿಮ ವಲಯ : ಗೋವಾ, ಗುಜರಾತ್, ಮಹಾರಾಷ್ಟ್ರ, ದಾಮನ್ ಮತ್ತು ಡಯ್ಯು, ದಾದ್ರ ಮತ್ತು ನಗರ ಹವೇಲಿ.
- ದಕ್ಷಿಣ ವಲಯ : ಅಂಡಮಾನ್ ಮತ್ತು ನಿಕೋಬಾರ್, ಆಂದ್ರಪ್ರದೇಶ, ತೆಲಾಂಗಣ, ಕರ್ನಾಟಕ, ಕೇರಳ, ಲಕ್ಷದ್ವೀಪ, ತಮಿಳುನಾಡು ಮತ್ತು ಪಾಂಡಿಚೇರಿ
- ಉತ್ತರ ಪೂರ್ವ ವಲಯ : ಅಸ್ಸಾಂ, ಅರುಣಾಚಲ ಪ್ರದೇಶ್, ಮಣಿಪುರ, ತ್ರಿಪುರ, ಮಿಜೋರಾಂ, ಮೇಘಾಲಯ, ನಾಗಾಲ್ಯಂಡ್ ಮತ್ತು ಸಿಕ್ಕಿಂ.

(ಬಿ) ಚರ್ಚೆ ನಡೆಯುವ ವಿಷಯಗಳು ;

- ಪ್ರತಿ ವಿಷಯದಲ್ಲಿ ಮುಖ್ಯವಾಗಿರುವ ಶಿಫಾರಸ್ಸುಗಳು
- ರಾಜ್ಯಮಟ್ಟದ ಸಮಾಲೋಚನಾ ದಾಖಲೆಗಳ ಶಿಫಾರಸ್ಸುಗಳು ಮತ್ತು
- ಪ್ರಾದೇಶಿಕತೆ ಸಂಬಂಧಿಸಿದ ನಿರ್ಧಿಷ್ಟ ವಿಷಯಗಳ ಬಗ್ಗೆ ಚರ್ಚೆ.

(ಸಿ) ರಾಜ್ಯಮಟ್ಟದ ಸಮಾಲೋಚನೆಗಳ ಶಿಫಾರಸ್ಸುಗಳು, ವಲಯಮಟ್ಟದ ಸಮಾಲೋಚನೆಗಳ ಶಿಫಾರಸ್ಸುಗಳ್ಳು, ವಿಷಯವಾರು ಚರ್ಚೆಗಳು ಮತ್ತು ಪ್ರಾಂತೀಯ ವಿಷಯವನ್ನೊಳಗೊಂಡ ಕ್ರೋಢೀಕೃತ ಶಿಫಾರಸ್ಸುಗಳನ್ನು ಪ್ರಾಂತೀಯ ಸಮಾಲೋಚನೆಯ ಕೊನೆಯಲ್ಲಿ ತಯಾರಿಸುವುದು.

**ವಿಷಯಾಧಾರಿತ ಸಮಾಲೋಚನೆಗಳು**

(ಎ) ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ವಿವಿಧ ಮುಖ್ಯಸ್ಥರು, ತಜ್ಞರು ಹಾಗೂ ಕಾರ್ಯಕ್ರಮಗಳ ಪಾಲುದಾರರೊಂದಿಗೆ ಪ್ರತಿ ವಿಷಯಗಳ ಬಗ್ಗೆ ಸಮಾಲೋಚನೆ ನಡೆಸುತ್ತಿದ್ದು, ಸದರಿ ಮುಖ್ಯಸ್ಥರು ಹೊಣೆಗಾರಿಕೆಯಿಂದ ಕೇಂದ್ರವಾಗಿರುತ್ತಾರೆ. ಎಂ.ಹೆಚ್.ಆರ್.ಡಿ. ಸ್ವಾಯತ್ತ ಸಂಸ್ಥೆಗಳು (ಉದಾ: ಎನ್.ಸಿ.ಟಿ.ಇ, ನ್ಯೂಪಾ, ಎನ್.ಸಿ.ಇ.ಆರ್.ಟಿ, ಎ.ಐ.ಸಿ.ಟಿ.ಇ, ಯು.ಜಿ.ಸಿ) ಸದರಿ ವಿಷಯಾಧಾರಿತ ಸಮಾಲೋಚನೆಯನ್ನು ನಡೆಸಲು ಸಹಕರಿಸುವುದು.

(ಬಿ) ಸದರಿ ಸಭೆ / ಕಾರ್ಯಾಗಾರಕ್ಕೆ ಆಹ್ವಾನಿಸುವಂಥ ವ್ಯಕ್ತಿಗಳು ಮತ್ತು ಸಂಸ್ಥಾ ಪ್ರತಿನಿಧಿಗಳು ಪ್ರಸ್ತುತದಲ್ಲಿರುವ ಶೈಕ್ಷಣಿಕ ಯೋಜನೆಗಳು / ಕಾರ್ಯ ತಂತ್ರಗಳನ್ನು ತಿಳಿದಿಕೊಂಡವರಾಗಿರಬೇಕು ಹಾಗೂ ವಿಷಯಗಳಿಗೆ ಮುಂದಿನ ಮಾರ್ಗದರ್ಶನ ನೀಡುವಂತಿರಬೇಕು.

**4.5 ಕಾರ್ಯಕ್ರಮಗಳ ಪಾಲುದಾರರೊಂದಿಗೆ ರಾಷ್ಟ್ರಮಟ್ಟದ ಸಮಾಲೋಚನೆ :**

6 ವಿಭಾಗಗಳಲ್ಲಿ ವಿಷಯಾಧಾರಿತ ಟಿಪ್ಪಣಿಗಳ ಸ್ಥಿತಿಗತಿಗಳ ಕ್ರೋಢೀಕೃತ ವರದಿಯ ಮೇಲೆ ರಾಷ್ಟ್ರಮಟ್ಟದಲ್ಲಿ ಸಭೆ ನಡೆಸುವುದು. ಸದರಿ ಸಭೆಗೆ ಎಲ್ಲಾ ಗುಂಪಿನ ಅನುಷ್ಠಾನಾಧಿಕಾರಿಗಳು, ಕೇಂದ್ರ ಸರ್ಕಾರದ ಸಚಿವರುಗಳು ಈ ಹಂತದ ಸಭೆಯಲ್ಲಿ ಭಾಗವಹಿಸುವುದು. ವಿಷಯದ ಚರ್ಚೆಯ ವಿವರವನ್ನು ಸಂಕ್ಷಿಪ್ತಗೊಳಿಸಿ, ಒಂದು ಕ್ರೋಢೀಕೃತ ಸಮಾಲೋಚನಾ ದಾಖಲೆಯನ್ನು ಸಿದ್ಧಪಡಿಸಿ, ಹೊಸ ಶಿಕ್ಷಣ ನೀತಿಯ ಟಾಸ್ಕ್ ಫೋರ್ಸ್ ಮುಂದೆ ಅನುಮೋದನೆಗಾಗಿ ಮಂಡಿಸುವುದು. (ಎನ್.ಇ.ಪಿ.ಟಿ.ಎಫ್). ಹೆಚ್ಚುವರಿ ಕಾರ್ಯದರ್ಶಿ(ಟಿ.ಇ.) ಇವರ ಅಧ್ಯಕ್ಷತೆಯಲ್ಲಿ ಎನ್.ಇ.ಪಿ.ಟಾಸ್ಕ್ ಫೋರ್ಸ್ ರಚಿಸಿದ್ದು, ಇದು ಸಮಾಲೋಚನಾ ಪ್ರಗತಿಯನ್ನು ಕಾಲಕಾಲಕ್ಕೆ ಉಸ್ತುವಾರಿ ಮಾಡುತ್ತದೆ. ಎನ್.ಇ.ಪಿ.ಟಿ.ಎಫ್.ನ ವಿವರವಾದ ಆಲೋಚನೆ ನಂತರ ಸಮಾಲೋಚನಾ ದಾಖಲೆಗೆ ಕರಡು ಹೊಸ ಶಿಕ್ಷಣ ನೀತಿ, 2015ರ ರೂಪವನ್ನು ನೀಡುವುದು. ನಂತರ, ಕರಡು ರಾಷ್ಟ್ರೀಯ ಶಿಕ್ಷಣ ನೀತಿ 2015ನ್ನು ಅನುಮೋದನೆಗಾಗಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಮುಂದೆ ಮಂಡಿಸುವುದು. (CABE – Central Advisory Board of Education).

**5. ರಾಜ್ಯದಿಂದ ಏನನ್ನು ನಿರೀಕ್ಷಿಸಲಾಗಿದೆ?**

- **ಪ್ರತಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಒಬ್ಬರು ಮತ್ತು ಉನ್ನತ ಶಿಕ್ಷಣದಿಂದ ಒಬ್ಬರಂತೆ ಇಬ್ಬರು ನೋಡಲ್ ಅಧಿಕಾರಿಗಳನ್ನು ಗುರ್ತಿಸುವುದು.**
- **ವೇಳಾಪಟ್ಟಿಯಲ್ಲಿ ತಿಳಿಸಿರುವಂತೆ ಸಮಾಲೋಚನಾ ಸಭೆಗಳನ್ನು ನಡೆಸುವುದು.**
    - ಗ್ರಾಮ ಶಿಕ್ಷಣ ಸಮಿತಿ ಮತ್ತು ಅನುಷ್ಠಾನ ಪಾಲುದಾರರು : ಏಪ್ರಿಲ್–ಮೇ, 2015
    - ಬ್ಲಾಕ್ ಶಿಕ್ಷಣ ಸಮಿತಿ ಮತ್ತು ಅನುಷ್ಠಾನ ಪಾಲುದಾರರು: ಜೂನ್–ಜುಲೈ, 2015
    - ನಗರ ಸ್ಥಳೀಯ ಸಂಸ್ಥೆಗಳು ಮತ್ತು ಅನುಷ್ಠಾನ ಪಾಲುದಾರರು: ಜೂನ್–ಜುಲೈ, 2015
    - ಜಿಲ್ಲಾ ಪಂಚಾಯತ್‌ಗಳು ಮತ್ತು ಅನುಷ್ಠಾನ ಪಾಲುದಾರರು: ಆಗಸ್ಟ್, 2015
    - ರಾಜ್ಯ : ಸೆಪ್ಟೆಂಬರ್, 2015

- **ಮಾಹಿತಿಯನ್ನು ಪ್ರಚಾರಗೊಳಿಸಲು ಸಭೆಗಳನ್ನು ನಡೆಸುವುದು.**
    - ಜಿಲ್ಲಾ ಮಟ್ಟದ ಅಧಿಕಾರಿಗಳು / ಪ್ರತಿನಿಧಿಗಳಿಗೆ ರಾಜ್ಯ ಮಟ್ಟದಲ್ಲಿ.
    - ಬ್ಲಾಕ್ ಮಟ್ಟದ ಅಧಿಕಾರಿಗಳು / ಪ್ರತಿನಿಧಿಗಳಿಗೆ ಜಿಲ್ಲಾ ಮಟ್ಟದಲ್ಲಿ
    - ಗ್ರಾಮಮಟ್ಟದ ಅಧಿಕಾರಿಗಳು / ಪ್ರತಿನಿಧಿಗಳಿಗೆ ಬ್ಲಾಕ್ ಮಟ್ಟದಲ್ಲಿ.
- **ಗ್ರಾಮ, ಬ್ಲಾಕ್, ನಗರ ಸ್ಥಳೀಯ ಸಂಸ್ಥೆಗಳು, ಜಿಲ್ಲೆ ಮತ್ತು ರಾಜ್ಯಮಟ್ಟದ ಶಿಫಾರಸ್ಸು / ನಡವಳಿಗಳನ್ನು ಅಪ್‌ಲೋಡ್ ಮಾಡುವುದು. :** MyGov Portal ನ ನಿಯಮದಂತೆ ರಾಜ್ಯ

ಮಾಹಿತಿ ಅಧಿಕಾರಿ (State Information Officers)ರವರ ಸಹಕಾರದೊಂದಿಗೆ MyGov Portal ನಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡುವುದು. MyGov ತಂಡದಿಂದ ಪ್ರತ್ಯೇಕವಾದ ಮಾರ್ಗದರ್ಶನ ಕೈಪಿಡಿಯನ್ನು ನೀಡಲಾಗುವುದು.

6. **ಮಾನವ ಸಂಪನ್ಮೂಲ ಇಲಾಖೆ ಏನನ್ನು ಒದಗಿಸುತ್ತದೆ :**

- ಗ್ರಾಮ, ಬ್ಲಾಕ್, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಚರ್ಚಿಸಬೇಕಾದ ಪ್ರಾಥಮಿಕ ಹಾಗೂ ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದ 33 ವಿಷಯಗಳಿಗೆ ಸಂಬಂಧಿಸಿದಂತೆ ವಿಷಯಗಳು ಮತ್ತು ಸಂಬಂಧಿಸಿದ ಪ್ರಶ್ನೆಗಳು.
- ರಾಜ್ಯದಲ್ಲಿ ನಡೆಯುವ ಸಮಾಲೋಚನಾ ಪ್ರಕ್ರಿಯೆಗಳನ್ನು ಉಸ್ತುವಾರಿ ಮಾಡಲು ಮತ್ತು ಅಗತ್ಯ ಸಹಕಾರವನ್ನು ನೀಡಲು ಸಂಬಂಧಿಸಿದ ರಾಜ್ಯಗಳಿಗೆ ಎಂ.ಹೆಚ್.ಆರ್.ಡಿ.ಯ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳು.
    - ಶಾಲಾ ಶಿಕ್ಷಣಕ್ಕೆ : Sh. T.S. Rautela, rautela.ts@gmail.com, 23388566.
    - ಉನ್ನತ ಶಿಕ್ಷಣಕ್ಕೆ : Sh. P.Sasikumar, sasiokd@yahoo.co.in, 23070660.
- ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ 33 ವಿಷಯಗಳ ವಿವರವಾದ ವಿವರಣೆ.